ಶಾಲೆಗಳು ವ್ಯಾಪಾರ ಕೇಂದ್ರಗಳಾಗದಿರಲಿ

ಮಕ್ಕಳಿಗೆ ಆಸ್ತಿ ಮಾಡದೇ ಮಕ್ಕಳನ್ನೇ ಆಸ್ತಿ ಮಾಡಿ | ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ

• **ಕನ್ನಡಪ್ರಭ ವಾರ್ತೆ** ಪ್ರಕೃತಿ ನಗರ ಸೇಡಂ (ಕಲಬುರಗಿ ಜಿಲ್ಲೆ)

ಶಾಲೆಗಳು ಜ್ಞಾನ ಕೇಂದ್ರಗಳಾಗಬೇಕೆ ಹೊರತು ವ್ಯಾಪಾರ ಮಾಡುವ ವ್ಯವಹಾರ ಕೇಂದ್ರಗಳಾಗಬಾರದು ಎಂದು ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಹೇಳಿದರು.

ಸೇಡಂ ತಾಲೂಕಿನ ಬೀರನಳ್ಳಿ ಕ್ರಾಸ್ ಬಳಿ ಪ್ರಕೃತಿ ನಗರದಲ್ಲಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಭಾರತ ವಿಕಾಸ ಸಂಗಮ ಮತ್ತು ವಿಕಾಸ ಅಕಾಡೆಮಿ ಸಹಯೋಗದಲ್ಲಿ ಆಯೋಜನೆಗೊಂಡ ಭಾರತೀಯ ಸಂಸ್ಕೃತಿ ಉತ್ಸವದ ಎರಡನೇ ದಿನ ಶೈಕ್ಷಣಿಕ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಮೌಲ್ಯಾಧಾರಿತ ಶಿಕ್ಷಣ ನೀಡಲು ಚಿಂತನೆ, ಪರಿಶೀಲನೆಯ ಅಗತ್ಯವಿದೆ. ಶಿಕ್ಷಕರು ಆಚಾರ್ಯರಾಗಬೇಕು. ಸದಾಚಾರ, ಮಾತೃಹೃದಯ, ಭವಿಷ್ಯ ನಿರ್ಮಾಣದ ಉತ್ಸುಕತೆ ಇರಬೇಕು. ಮಕ್ಕಳಿಗೆ ಆಸ್ತಿ ಮಾಡದೇ ಮಕ್ಕಳನ್ನೆ ಆಸ್ತಿ ಮಾಡಬೇಕು. ವಿದ್ಯಾಕೇಂದ್ರಗಳು ಜ್ಞಾನ ಕೇಂದ್ರಗಳಾಗಬೇ, ವ್ಯವಹಾರ ಕೇಂದ್ರಗಳಾಗಬಾರದು ಎಂದರು.

ಅಯೋಧ್ಯ ರಾಮಮಂದಿರ ಟ್ರಸ್ಟ್ ಕೋಶಾಧ್ಯಕ್ಷ ಶ್ರೀ ಗೋವಿಂದ ದೇವ್ ಗಿರಿ ಮಹಾರಾಜ್, ಹೊಸಪೇಟೆಯ ಕೊಟ್ಟೂರು ಸಂಸ್ಥಾನದ ಜಗದ್ಗುರು ಬಸವಲಿಂಗ ಮಹಾಸ್ವಾಮಿಗಳು, ಮಾಜಿ ಸಚಿವ ಶಿವನಗೌಡ ನಾಯಕ್ ದೇವದುರ್ಗ, ಉತ್ತರ ಪ್ರದೇಶದ ಗೇಟರ್

ನೋಯ್ಡಾ ಶಿಕ್ಷಣ ತಜ್ಞ ಡಾ.ಜೆ.ಎಸ್.ರಜಪೂತ್, ಮಣಿಪುರ ಮುಖ್ಯಮಂತ್ರಿಗಳ ಸಲಹೆಗಾರ ಹಾಗೂ ಮಾಜಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ತೋಕ್ಚೋಂ ರಾಧೇಶ್ಯಾಮ್ ಸಿಂಗ್, ಹರಿಯಾಣ ಕುರುಕ್ಷೇತ್ರದ ಬ್ರಹ್ಮ ಸರೋವರ ಮಾತೃಭೂಮಿ ಸೇವಾ ಮಿಷನ್‌ನ ಡಾ.ಪ್ರಕಾಶ ಮಿಶ್ರಾ, ನಿವೇದಿತಾ ಬೇಂದ್ರೆ ಇತರರಿದ್ದರು.

ಮೆಕಾಲೆ ಶಿಕ್ಷಣ ಬೇಡ, ಮೌಲ್ಯಾಧಾರಿತ ಶಿಕ್ಷಣ ಬೇಕು: ಮೆಕಾಲೆ ಶಿಕ್ಷಣ ಬೇಡ, ಮೌಲ್ಯಾಧಾರಿತ ಶಿಕ್ಷಣ ಬೇಕು ವಿದ್ಯಾರ್ಥಿಗಳ, ಶಿಕ್ಷಕರ ಸಂಬಂಧ ಸರಿಯಾಗಿಲ್ಲ. ತಕ್ಷಶಿಲಾ, ನಳಂದಾ ಇಲ್ಲಿಯೇ ಉದ್ಭವವಾಗಿದ್ದರೂ ಮೆಕಾಲೆ ಶಿಕ್ಷಣ ಪದ್ಧತಿ ಆಳವಡಿಕೆಯಿಂದ ತೊಂದರೆ ಆಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ ವಿಚಾರ ವಿನಿಮಯ ಮಾಡಿಕೊಂಡು, ಅದನ್ನು ಮುಂದುವರಿಸಬೇಕು ಎಂದು ಎಂದು ನವದೆಹಲಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷ ಡಾ.ಅನೀಲ ಡಿ. ಸಹಸ್ರಬುದ್ದೆ ಹೇಳಿದರು.

ಶಿಕ್ಷಣ ಪದ್ಧತಿಗೆ ಹಣವೇ ಶ್ರೇಷ್ಠ ಎಂಬಂತಾಗಿದೆ- ರಾಷ್ಟ್ರಕೂಟರು ಇದೇ ನೆಲದಿಂದಲೇ ಇಡೀ ರಾಷ್ಟ್ರ ಆಳಿದ್ದರು. ವಿಶ್ವದ ತಜ್ಞರು ಭಾರತಕ್ಕೆ ಬರುತ್ತಿದ್ದರು. ಆದರೆ ಇಂದು ನಾವು ಅದರಿಂದ ದೂರ ಆಗಿದ್ದೇವೆ. ವಿವಿ ಕುಲಪತಿ ಮಾಡುವಾಗ ಜಾತಿ ನೋಡುವಂತಾಗಿದೆ. ವಿವಿಗಳಲ್ಲಿ ಭ್ರಷ್ಟಾಚಾರ ಮಿತಿ ಮೀರುತ್ತಿದೆ. ಇದರ ಮಧ್ಯೆ ಭಾರತ ಸೂಪರ್‌ಪವರ್‌ಮಾಡಬೇಕು. ಯುಜಿಸಿ ಕಪಿಮುಷ್ಟಿಯಿಂದ ಶಿಕ್ಷಣ ಪದ್ಧತಿಯನ್ನು ದೂರ ಮಾಡಿಸಬೇಕು. ಯುಜಿಸಿ ಪ್ರೊಫೆಸರಗಳಿಂದ ಪ್ರೊಪೆಸರ್‌ಗಳ ಸಂಸ್ಥೆ ಆಗಿದೆ. ಹೊಸ ವಿಚಾರಗಳು ನೀಡುವ ರಾಷ್ಟ್ರ ಬೇಕಿದೆ.

• **ಅರವಿಂದ್ ಬೆಲ್ಲದ** ಶಾಸಕರು, ಧಾರವಾಡ

ಮೌಲ್ಯಾಧಾರಿತ ಶಿಕ್ಷಣ ನೀಡಲು ಸಮಯವೇ ಇಲ್ಲ. ಪಂಚಕೋಶಿಯ ವಿಕಾಸ ನಡೆಯಬೇಕಿದೆ. ಅನ್ನ, ವಿಜ್ಞಾನ, ಮನೋಮಯ, ಆನಂದಮಯ ಜ್ಞಾನ ಹಂಚಿಕೊಳ್ಳಬೇಕು. ಭಾರತೀಯ ಜ್ಞಾನ ಪರಂಪರೆ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಆಗ ಪಂಚಕೋಶಿಯ ವಿಕಾಸ ಸಾಧ್ಯ.

• **ಮಾತೋಶ್ರೀ ಅನಂತಲಕ್ಷ್ಮೀ,** ಸಹ ಸಂಸ್ಥಾಪಕಿ, ತಮಿಳುನಾಡಿನ ಪಳನಿಯ ಅನಾದಿ ಫೌಂಡೇಶನ್ ಗುರುಕುಲಂ.

ಕಾಗೇರಿ ವಿಷಾದ: ಇಂದಿನ ಶಿಕ್ಷಣ ಪದ್ಧತಿಯಲ್ಲಿ ಹಣವೇ ಶ್ರೇಷ್ಠ ಎಂಬಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ ಮಾಜಿ ಶಿಕ್ಷಣ ಸಚಿವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯು ಸಮಾಜ, ರಾಷ್ಟ್ರ ಜಾಗೃತಿ ಮೂಡಿಸುತ್ತಿರುವ ಕಾರ್ಯ. ತ್ಯಾಗಿಗಳ, ಋಷಿ ಪರಂಪರೆಯ ಶ್ರೇಷ್ಠ ತಂಡ. ವಿಕಾಸ ಅಕಾಡೆಮಿಯಿಂದ ಶ್ರೇಷ್ಠ ಕಾರ್ಯವೆನಿಸಿದೆ.

ಸುಸ್ಥಿರತೆ, ಐಕ್ಯತೆಯಡಿ ರಾಷ್ಟ್ರ ಮುನ್ನಡಿಸುವ ಯೋಜನೆ. ಭಾರತ ಪ್ರಗತಿ ಪಥದಲ್ಲಿ ಇದೆ. ಅದರ ಹಿಂದೆ ಭಾರತೀಯ ಶಿಕ್ಷಣ, ಸಂಸ್ಕಾರ ಇದೆ. ಮಾರಿಷಸ್ ನವನಿದ್ದರೂ ದೀಲ್ ಸೇ ಹಿಂದುಸ್ತಾನಿ. ಪೂರ್ವಜರು ಭಾರತೀಯರು. ಹಲವು ನದಿ, ಭಾಷೆ, ಸಂಸ್ಕೃತಿಯ ಮಹಾಸಂಗಮ ಭಾರತ. ತತ್ವಜ್ಞಾನಿಗಳ ಗಣಿಯೇ ಇಲ್ಲಿದೆ. ಶ್ರೀಮಂತ ಸಂಸ್ಕೃತಿಯ ದೇಶ ಹಿಂದುಸ್ತಾನ. ವಿಶ್ವಕ್ಕೆ ಒಂದು ಶಕ್ತಿ ನೀಡಿದೆ. ಇಲ್ಲಿಂದಲೇ ವಸುಧೈವ ಕುಟುಂಬಕಂ ತತ್ವ ಇದೆ.

• **ಯುಧಿಷ್ಠರ ಮನಬೋಧ್,** ಮಾರಿಷಸ್‌ನ ಶಿಕ್ಷಣ

ಒಳ್ಳೆಯರಾಗಿರಿ ಮತ್ತು ಒಳ್ಳೆಯದನ್ನು ಮಾಡಿರಿ ಹಾಗೂ ಒಳ್ಳೆಯವರ ಸಹವಾಸದಿಂದ ಅಳಿಲು ಸೇವೆ ಸಲ್ಲಿಸಲು ಶ್ರಮಿಸಬೇಕಿದೆ ಎಂದು ಮಾಜಿ ಶಿಕ್ಷಣ ಸಚಿವ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಟಾಯ್ಸ್‌ಉತ್ಸವದಲ್ಲಿ ಚೆನ್ನಪಟ್ಟಣದ ಮರದ ಕತ್ತನೆಯ ಆಟಿಕೆಗಳ ಮಳಿಗೆಗೆ ಮುಗಿಬಿದ್ದಿರುವ ಜನ

ಟಾಯ್ಸ್‌ಉತ್ಸವದಲ್ಲಿ ಚೆನ್ನಪಟ್ಟಣದ ಮರದ ಕತ್ತನೆಯ ಆಟಿಕೆಗಳ ಮಳಿಗೆಗೆ ಮುಗಿಬಿದ್ದಿರುವ ಜನ

ಭಾರತೀಯ ಸಂಸ್ಕೃತಿ ಉತ್ಸವ ನಡೆದಿರುವ ಪ್ರಕೃತಿ ನಗರದ ಮಹಾ ದ್ವಾರದಲ್ಲೇ ದಾಸರ ತೊಟ್ಟಿಲೆಂದೇ ಖ್ಯಾತಿಯಾಗಿರುವ ಕಲ್ಯಾಣ ಭಾಗವನ್ನು ಸೂಚಿಸಲು ವಿಜಯದಾಸರ ಪ್ರತಿಕೃತಿ ನಿಲ್ಲಿಸಲಾಗಿದ್ದು ಗಮನ ಸೆಳೆಯುತ್ತಿದೆ.

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಚಿತ್ತಾಪುರದಲ್ಲಿರುವ ನಾಗಾವಿ ಎಲ್ಲಮ್ಮ ಮಂದಿರದ ಪ್ರತಿಕೃತಿ

ಮಕ್ಕಳ ಲೋಕದಲ್ಲಿ ನಿರ್ಮಿಸಲಾಗಿರುವ ಸ್ಮಾರಕಗಳ ಪ್ರತಿಕೃತಿ ಮುಂದೆ ಯುವಕರು ಯುವತಿಯರು ಮೊಬೈಲ್ ಸೆಲ್ಫೀ ಕ್ಲಿಕ್ಕಿಸಿದರು

ಪ್ರವಾಸಿಗರ ಸೆಳೆಯಲು ಬೋಟ್ ವ್ಯವಸ್ಥೆ

ಚಂದ್ರಂಪಳ್ಳಿ ಜಲಾಶಯ ಸೊಬಗು ನೋಡಲು ಪ್ರವಾಸಿಗರಿಗೆ ಅನುಕೂಲ: ಸಿದ್ದಾರೂಢ

• **ಕನ್ನಡಪ್ರಭ ವಾರ್ತೆ** ಚಿಂಚೋಳಿ

ತಾಲೂಕಿನ ಕುಂಚಾವರಂ ವನ್ಯಜೀವಿಧಾಮ ಅರಣ್ಯಪ್ರದೇಶಕ್ಕೆ ಹೊಂದಿಕೊಂಡಿರುವ ಬೆಟ್ಟಗುಡ್ಡಗಳ ಮಧ್ಯೆ ನೈಸರ್ಗಿಕ ಅರಣ್ಯಪ್ರದೇಶದಲ್ಲಿ ನಿರ್ಮಿಸಿದ ಚಂದ್ರಂಪಳ್ಳಿ ಜಲಾಶಯ ಹಚ್ಚ ಹಸಿರಿನ ಸುಂದರ ಸೊಬಗನ್ನು ನೋಡುವುದಕ್ಕಾಗಿ ಪ್ರವಾಸಿ ತಾಣಕ್ಕೆ ಪ್ರವಾಸಿಗರ ಆಕರ್ಷಿಸಲು ವನ್ಯಜೀವಿಧಾಮ ಇಲಾಖೆ ಸಿದ್ದತೆಯನ್ನು ಮಾಡಿಕೊಳ್ಳುತ್ತಿದೆ ವನ್ಯಜೀವಿಧಾಮ ವಲಯ ಅಧಿಕಾರಿ ಸಿದ್ದಾರೂಢ ಹೊಕ್ಕುಂಡಿ ತಿಳಿಸಿದ್ದಾರೆ.

ಚಿಂಚೋಳಿ ತಾಲೂಕಿನ ಚಂದ್ರಂಪಳ್ಳಿ ಜಲಾಶಯ ಸುಂದರ ಸೊಬಗನ್ನು ಮತ್ತು ಜಲಾಶಯದಿಂದ ಹರಿಯುವ ನೀರಿನ ರಮಣೀಯ ದೃಶ್ಯವನ್ನು ನೋಡುವುದಕ್ಕಾಗಿ ಬೀದರ್, ಕಲಬುರಗಿ ಸೇರಿದಂತೆ ನೆರೆ ರಾಜ್ಯದ ಜನರು ಇಲ್ಲಿಗೆ ಪ್ರತಿವರ್ಷ ಆಗಮಿಸುತ್ತಿರುವುದರಿಂದ ಪ್ರವಾಸಿಗರಿಗೆ ಜಲಕ್ರೀಡೆ ಆಡಲು ಬೋಟಿನ ವ್ಯವಸ್ಥೆ ಮತ್ತು ಕಾಟೇಜ್‌ನಲ್ಲಿ ತಂಗುವುದಕ್ಕಾಗಿ ವಿದ್ಯುತ್ ದೀಪಗಳಿಂದ ಅಲಂಕರಿಸಿ ಶುಚಿಗೊಳಿಸಲಾಗಿದೆ ಎಂದರು.

ಗೊಟ್ಟಂಗೊಟ್ಟ ಅರಣ್ಯಪ್ರದೇಶದಲ್ಲಿರುವ ವನ್ಯಜೀವಿಧಾಮದ ವಾಚ್ ಟವರ್ ಮೇಲೆ ನಿಲ್ಲಲು ಮತ್ತು ಎತ್ತಪೋತ ಮತ್ತು ಮಾಣಿಕಪೂರ ಜಲಧಾರೆ ನೋ ಡುವುದಕ್ಕಾಗಿ ಬರುವ ಪ್ರವಾಸಿಗರಿಗೆ ಸುರಕ್ಷತೆ ಕ್ರಮ ಕೈಕೊಳ್ಳಲಾಗುತ್ತಿದೆ ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿಯೇ ನೈಸರ್ಗಿಕವಾಗಿ ಅತಿ ಸುಂದರ ಮಲೆನಾಡಿನ ಪ್ರದೇಶವೆಂದು ಪ್ರಖ್ಯಾತಿ ಪಡೆದಿರುವ ಚಂದ್ರಂಪಳ್ಳಿ ಜಲಾಶಯ ಸುತ್ತಮುತ್ತಲು ಟ್ರೆಕ್ಕಿಂಗ್ ಮಾಡುವವರಿಗೆ ಸುರಕ್ಷತೆ ಮಾಡಲಾಗಿದೆ. ಮಳೆಗಾಲದಲ್ಲಿ ಮಳೆ ಆಸರೆಗಾಗಿ ಶೆಡ್ ನಿರ್ಮಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ಸಿದ್ದಾರೂಢ ಹೊಕ್ಕಂಡಿ ತಿಳಿಸಿದ್ದಾರೆ.

ಚಂದ್ರಂಪಳ್ಳಿ ಜಲಾಶಯ ಬಳಿ ಬೋಟು ನಿಲುಗಡೆಗಾಗಿ ಸಿದ್ಧತೆ ನಡೆದಿದೆ.

ಹೀರೋ ಡೆಸ್ಟಿನಿ ನೂತನ ಬೈಕ್ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಇಲ್ಲಿನ ವೆಂಕಟೇಷ ಹಿರೋ ಷೋರೂಮ್‌ನಲ್ಲಿ ಗುರುವಾರ ಹೀರೋ ಕಂಪನಿಯ ನೂತನ ಹಾಗೂ ಸುಧಾರಿತ ಮಾದರಿಯ 125 ಸಿಸಿ ಬೈಕ್ ಹಿರೋ ಡೆಸ್ಟಿನಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.

ಎಂಎಲ್‌ಸಿ ಬಿಜಿ ಪಾಟೀಲ್, ಕೆಕೆಆರ್‌ಟಿಸಿ ಎಂಡಿ ರಾಚಪ್ಪ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಸಾದಿಕ್ ಹುಸೇನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ನೂತನ ಬೈಕ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ ಹೀರೋ ಷೋರೂಮ್ ಮಾಲೀಕರಾದ ಕೃಷ್ಣಾಜಿ ಕುಲಕರ್ಣಿ ಹಾಗೂ ದೇವರಾಜ ಕುಲಕರ್ಣಿಯವರು, ಹೀರೋ ಕಂಪನಿಯ ಆಕರ್ಷಕ ಹಾಗೂ ಸುಧಾರಿತ ಮಾದರಿ ಬೈಕ್ ಇದಾಗಿದೆ. ತಾಳಿಕೆ, ದೀರ್ಘ ಬಾಳಿಕೆಯ ಈ ಬೈಕ್ ಸಂಪೂರ್ಣ ಹೊಸತಾಗಿದೆ. 59 ಕಿ.ಮೀ. ಮೈಲೇಜ್‌ನ ಈ ಬೈಕ್ ಉದ್ದನೆಯ ಆಸನ ಸವಲತ್ತು, ಕಾಲಿಡಲು ವಿಶಾಲವಾದ ಮುಂದಿನ ಪುಟ್ ಬೋರ್ಡ್ ಹೊಂದಿದೆ ಎಂದು ಹಲವು ಸಂಗತಿಗಳನ್ನು ವಿವರಿಸಿದರು. ಹೀರೋ ಕಂಪನಿಯ ವಾಣಿಜ್ಯ ವಿಭಾಗದ ಅಧಿಕಾರಿ ವೆಂಕಟೇಶ ಆಚಾರ್ಯ, ಷೋರೂಮ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಮೇಳಕುಂದಾ ದೇವಾಲಯ ಕಮಿಟಿಗೆ ಹಸ್ತಾಂತರ ವಿರೋಧಿಸಿ ಪ್ರತಿಭಟನೆ

ಕಲಬುರಗಿಯಲ್ಲಿ ತಹಸೀಲ್ದಾರ್ ವಿರುದ್ಧ ಕುರುಬರ ಸಂಘದಿಂದ ಹೋರಾಟ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ತಾಲೂಕಿನ ಮೇಳಕುಂದಾ (ಬಿ) ಗ್ರಾಮದ ಶ್ರೀ ಮಾಳಿಂಗರಾಯ ದೇವಸ್ಥಾನದ ಹಸ್ತಾಂತರ ವಿಷಯದಲ್ಲಿ ಏಕಪಕ್ಷೀಯ ನಿರ್ಧಾರ ಕೈಗೊಂಡಿರುವ ಕಲಬುರಗಿ ತಹಸೀಲ್ದಾರ್‌ವಿರುದ್ಧ ಪ್ರದೇಶ ಕುರುಬರ ಸಂಘದಿಂದ ನಗರದಲ್ಲಿ ಭಾರಿ ಪ್ರತಿಭಟನೆ ನಡೆಯಿತು.

ಸಂಘದ ಜಿಲ್ಲಾಧ್ಯಕ್ಷ ಗುರುನಾಥ ಪೂಜಾರಿ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಮಹಿಳೆಯರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಸೇರಿದ್ದರು.

ಜಗತ್ ವೃತ್ತದಿಂದ ಶುರುವಾದ ಪ್ರತಿಭಟನೆಯಲ್ಲಿ ಹೋರಾಟಗಾರರು ಮಾನವ ಸರಪಳಿ ರಚಿಸಿ ಸಂಚಾರ ತಡೆ ಮಾಡಿದರು. ಜಗತ್, ಡಿಸಿ ಕಚೇರಿ ರಸ್ತೆಯಲ್ಲಿ 2 ಗಂಟೆಗಳ ಕಾಲ ಸಂಚಾರ ಸ್ಥಗಿತವಾಗಿತ್ತು. ತಹಸೀಲ್ದಾರ್ ಹೋರಾಟದ ಸ್ಥಳಕ್ಕೆ ಬರಬೇಕು, ಜಿಲ್ಲಾಧಿಕಾರಿ ಬಂದು ಪ್ರಕರಣ ಇತ್ಯರ್ಥ ಮಾಡಬೇಕು ಎಂದು ಹೋರಾಟಗಾರರು ಪಟ್ಟು ಹಿಡಿದರು.

ಪೊಲೀಸರು ಹೆಚ್ಚಿನ ಹೊತ್ತು ರಸ್ತೆ ತಡೆಯಾಗುತ್ತಿರೋದರಿಂದ ಜನತೆಗೆ ತೊಂದರೆಯಾಗುತ್ತಿದೆ ಎಂದು ಹೋರಾಟಗಾರರ ಮನವೊಲಿಸಿ ಅವರನ್ನೆಲ್ಲ ಐವಾನ್ ಐಷಾಹಿ ರಸ್ತೆಯಲ್ಲಿನ ಸಮಾಜ ಕಲ್ಯಾಣ ಇಲಾಖೆ ಮುಂದೆ ಕುಳ್ಳಿರಿಸಿ ರಸ್ತೆ ಸಂಚಾರಕ್ಕೆ ಮುಕ್ತವಾಗಿಸಿದರು.

ಸಿವಿಲ್ ಕೋರ್ಟ್‌ನಲ್ಲಿ ಒಂದು ವಿಷಯದ ಕುರಿತು ಪ್ರಕರಣ ಬಾಕಿ ಇರುವಾಗ ಯಾವುದೇ ಮುಂದುವರಿದ ಕ್ರಮ ಕೈಗೊಳ್ಳುವಂತಿಲ್ಲ ಎಂಬ ನಿಯಮ ಇದ್ದರೂ, ಕಲಬುರಗಿ ತಹಸೀಲ್ದಾರ್‌ಯಾವುದೇ ನಿಯಮಾವಳಿ ಲೆಕ್ಕಿಸದೆ ಗ್ರಾಮದ ಸಿದ್ದೇಶ್ವರ ಕಮಿಟಿಗೆ ಮಾಳಿಂಗರಾಯ ದೇವಸ್ಥಾನ ಹಸ್ತಾಂತರಿಸಿ ನ್ಯಾಯಾಂಗ ನಿಂದನೆ ಮಾಡಿದ್ದಾರೆಂದು ಗುರುನಾಥ ಪೂಜಾರಿ ದೂರಿದ್ದಾರೆ.

ಮೇಳಕುಂದಾ (ಬಿ) ಗ್ರಾಮದ ಮಾಳಿಂಗರಾಯ ದೇವಸ್ಥಾನದಲ್ಲಿ ಕುರುಬ ಸಮಾಜದವರು ತಲಾಂತರಗಳಿಂದ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ಹೀಗಿರುವಾಗ ಗ್ರಾಮದ ಕೆಲವರು 2016ರಲ್ಲಿ ದೇವಸ್ಥಾನದ ಪೂಜಾರಿಯನ್ನು ಥಳಿಸಿ ದೇವಸ್ಥಾನದಿಂದ ಹೊರಗೆ ಹಾಕಿದ್ದಲ್ಲದೆ, ಮಾಳಿಂಗರಾಯ ಎಂದಿದ್ದ ಬೋರ್ಡ್ ತೆಗೆದು ಸಿದ್ಧೇಶ್ವರ ಎಂದು ಬದಲಿಸಿದ್ದಾರೆ. ಈ ಕುರಿತು ಈಗಲೂ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣಾ ಹಂತದಲ್ಲಿದೆ. ಆದಾಗ್ಯೂ, ಕಲಬುರಗಿ ತಹಸೀಲ್ದಾರ್ ನಿಯಮಾವಳಿಗಳನ್ನು ಗಾಳಿಗೆ ತೂರಿ ಕುರುಬ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆಂದು ಹೋರಾಟಗಾರರು ದೂರಿದ್ದಾರೆ.

ಸಂಘದ ನಿರ್ದೇಶಕ ಶಿವಾನಂದ ಮಾರ್ಕಾಂಡೇಯ, ಸಂಘಟನಾ ಕಾರ್ಯದರ್ಶಿ ಜಗನ್ನಾಥ ನಾಗೂರೆ ಹಾಗೂ ಸಮಾಜದ ಮುಖಂಡ ಕಾಶಿನಾಥ ಪೂಜಾರಿ ಇದ್ದರು.

ಕಲಬುರಗಿ ನಗರದ ವಾರ್ಡ್ 47 ರಲ್ಲಿ ಶಾಸಕ ಅಲ್ಲಂಪ್ರಭು ಪಾಟೀಲ್ 5 ಲಕ್ಷ ರು. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು. ಮಾಜಿ ಮಹಾಪೌರ ರವೀಂದ್ರನಾಥ ಹೊನ್ನಳ್ಳಿ, ಭೀಮ್ ಆರ್ಮಿಯ ಎಸ್.ಎಸ್ ತಾವಡೆ, ಅರ್ಜುನ ಚೌಧರಿ, ರಾಣಪ್ಪ, ಶಾಂತಕುಮಾರ್, ಶಿವಪುತ್ರ, ಬಕ್ಕಪ್ಪ, ಭೀಮ್ ಆರ್ಮಿಯ ಜಿಲ್ಲಾಧ್ಯಕ್ಷ ಸುನೀಲ ಇಟಗಿ, ವಿಜಯ ಸೀತನೀರ್, ಸಂತೋಷ ಇದ್ದರು.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಚಿತ್ತಾಪೂರ

ಅಪರಾದ ಸಂಕೀರ್ಣ ಸಂಖ್ಯೆ: 72/2025

1. ಜಗನಾಥ ತಂದೆ ದಿ. ಸುಭಾನಪ್ಪ, ವಯಸ್ಸು: 46 ವರ್ಷಗಳು, ಉದ್ಯೋಗ: ಒಕ್ಕಲುತನ, ಸಾ: ಬೇಣ್ಣೂರ(ಕೆ) ಗ್ರಾಮ, ತಾ: ಕಾಳಗಿ, ಜಿ: ಕಲಬುರಗಿ
2. ನಾಗಪ್ಪ ತಂದೆ ದಿ. ಸುಭಾನಪ್ಪ, ವಯಸ್ಸು: 48 ವರ್ಷಗಳು, ಉದ್ಯೋಗ: ಒಕ್ಕಲುತನ, ಸಾ: ಬೇಣ್ಣೂರ(ಕೆ) ಗ್ರಾಮ, ತಾ: ಕಾಳಗಿ, ಜಿ: ಕಲಬುರಗಿ

...ಅರ್ಜಿದಾರರು

ವಿರುದ್ಧ

1. ಜನನ ಮತ್ತು ಮರಣ ನೊಂದಣಾಧಿಕಾರಿಗಳು ಹಾಗೂ ತಹಸೀಲ್ ಕಾರ್ಯಾಲಯ ಕಾಳಗಿ, ತಾ: ಕಾಳಗಿ, ಜಿ: ಕಲಬುರಗಿ
2. All Concerned

...ಎದುರುದಾರರು

ಜನನ ಮತ್ತು ಮರಣ ನೊಂದಣಿ ಅಧಿನಿಯಮ, 1969 ಕಲಂ 13(3) ರಡಿಯಲ್ಲಿ ಅರ್ಜಿದಾರರ ಪರ ಅರ್ಜಿ.

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ **ದಿ. ಸುಭಾನಪ್ಪ ತಂದೆ ಧರ್ಮಣ್ಣ**, ರವರು ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿನ **ಬೇಣ್ಣೂರ(ಕೆ) ಗ್ರಾಮ**ದಲ್ಲಿ ದಿನಾಂಕ ದಿನಾಂಕ: **26-09-2010** ರಂದು ತಮ್ಮ ಸ್ವಂತ ನಿವಾಸದಲ್ಲಿ ಮರಣ ಹೊಂದಿರುತ್ತಾನೆ. ಕಾರಣ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟವರು ಸದರಿ ಅರ್ಜಿಯನ್ನು ಮಾನ್ಯ ಮಾಡಲು ಏನಾದರು ತಕರಾರು ಇದ್ದರೆ ಅವರು ದಿನಾಂಕ 03-03-2025 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಈ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ. ಸದರಿ ದಿನದಂದು